

ಡಾ.ವಿನೋದ ಛೆಬ್ಬಿ

ಒಬ್ಬರ ಕೋಪವನ್ನು ಇನ್ನೊಬ್ಬರ ಮೇಲೆ ತೋರಿಸುವುದು ಎಂದರೆ ಇದೇನಾ?

# 121: ಜಗಳದ ಮೂಲ-3

ದಂಪತಿಗಳಾದ ಮಹೇಶ ಹಾಗೂ ಮಮತಾ ತಮ್ಮ ಬಾಲ್ಯದ ಸಮಸ್ಯೆಗಳನ್ನು ದಾಂಪತ್ಯಕ್ಕೆ ಹೊತ್ತು ತಂದಿದ್ದಾರೆ. ಜಗಳದಲ್ಲಿ ಮಮತಾ ತನ್ನ ಆತಂಕವನ್ನು ನಿಭಾಯಿಸಲು ಆಗದೆ ಮಹೇಶನ ಮೇಲೆ ತಂದುಹಾಕುತ್ತಿದ್ದರೆ, ಮಹೇಶ ಅವಳಿಂದ ತಪ್ಪಿಸಿಕೊಳ್ಳುವುದರ ಮೂಲಕ ತನ್ನ ಆತಂಕವನ್ನು ನಿಭಾಯಿಸುತ್ತಿದ್ದಾನೆ ಎಂದು ಗೊತ್ತಾಗಿದೆ.

ಅವರ ಕಲಹಚಕ್ರ ವಿಷಮಿಸುವುದು ಹೇಗೆಂದೂ ಗಮನಿಸಿದೆ. ಮಮತಾ ತನ್ನ ಬಾಂಧವ್ಯದ ಬೇಡಿಕೆಯನ್ನು ಮುಂದಿಡುವಾಗ ಮಹೇಶ ಅದೊಂದು ಜವಾಬ್ದಾರಿ ಎಂದುಕೊಳ್ಳುತ್ತ, ಅದನ್ನು ಪೂರೈಸುವುದಕ್ಕೆ ಲೆಕ್ಕಹಾಕುತ್ತ ತನ್ನಷ್ಟಕ್ಕೆ ತಾನಾಗುತ್ತಾನೆ. ಇದನ್ನು ಮಮತಾ ತನ್ನಿಂದ ಕಳಚಿಕೊಳ್ಳುವ ಹವಣಿಕೆಯೆಂದು ಭಾವಿಸಿ ಅವನ ಮೇಲೆ ಅಪನಂಬಿಕೆ ತೋರಿಸುತ್ತಾಳೆ. ಅದಕ್ಕೆ ಅವನು ಆಕೆಗೆ ಹೇಗೆ ಭರವಸೆ ಕೊಡಬೇಕೆಂದು ತಿಳಿಯದೆ ಹಿಂಜರಿಯುತ್ತಾನೆ. ಅದನ್ನಾಕೆ ಅವನು ತನ್ನಿಂದ ದೂರವಾಗುತ್ತಿದ್ದಾನೆ ಎಂದು ಭಾವಿಸುತ್ತಾಳೆ. ದೂರವಾಗುವವನ ಜೊತೆ ಇನ್ನೇನು ಮಾತು? ಅದಕ್ಕೇ ಕೋಪ, ತಿರಸ್ಕಾರ ತೋರಿಸುತ್ತಾಳೆ. ಹಾಗಾಗಿಯೇ ಬಯ್ಗುಳು, ಹೀನೈಕೆ.

ಹೀನೈಕೆ ಎನ್ನುವಾಗ ಮಮತಾಳ ಹೀನೈಕೆಯಲ್ಲಿ ಒಂದು ವೈಚಿತ್ರ ಎದ್ದುಕಂಡಿತು. ಚಿಕ್ಕ ಕಾರಣಕ್ಕೂ ಆಕೆ ಕಟುವಾದ ಮಾತುಗಳನ್ನೇ ಹೀಯಾಳಿಸಲು ಆಯ್ದುಕೊಳ್ಳುತ್ತಾಳೆ. ಉದಾ. ಅಮ್ಮನ ಸೆರಗಿನ ಹಿಂದೆ ಬಚ್ಚಿಟ್ಟುಕೊಳ್ಳುತ್ತಾನೆ, ಸ್ವಂತಬುದ್ಧಿ ಇಲ್ಲದವ, ಇವನೇನು ಮನುಷ್ಯನೆ ಇತ್ಯಾದಿ. ಇನ್ನೂ ವಿಚಿತ್ರವೆಂದರೆ, ಮಹೇಶನ ತಾಯಿಯನ್ನೂ ಅಷ್ಟೇ ಅಸಹ್ಯಕರ ಹಾಗೂ ಅಸಂಬದ್ಧ ಪದಗಳಿಂದ (ಉದಾ. ದಿಕ್ಕಿಲ್ಲದವಳು, ಸೂಳೆ) ಹೀನೈಸುತ್ತಾಳೆ. ಅಷ್ಟಕ್ಕೂ ಅತ್ತೆ ಸೊಸೆ ಕೂಡಿದ್ದದ್ದು ಐದಾರು ದಿನ ಮಾತ್ರ. ಹಾಗಾಗಿ ಇಬ್ಬರ ನಡುವೆ ಅಂಥದ್ದೇನೂ ನಡೆದಿಲ್ಲ. ಸೊಸೆಯ ಬಗೆಗೆ ತಲೆ ಕೆಡಿಸಿಕೊಳ್ಳದೆ ತನ್ನ ಪಾಡಿಗೆ ತಾನಿದ್ದು ಮಗನ ಬಗೆಗೆ ವಾತ್ಸಲ್ಯ ಹೊಂದಿರುವ ಹಿರಿಯ ವ್ಯಕ್ತಿಯ ಬಗೆಗೆ ಹೀಗೇಕೆ?

ಏನೋ ನೆನಪಿಗೆ ಬಂದು ಮಹೇಶನನ್ನು ಕೇಳಿದೆ. 'ಮಮತಾಳ ಯಾವ ಗುಣಗಳನ್ನು ಮೆಚ್ಚಿ ಮದುವೆಯಾಗಿದಿರಿ?' ಮಹೇಶ ಹೇಳಿದ: 'ಮಮತಾ ಇಮೈಲ್‌ನಲ್ಲಿ ತಿಳಿಸಿದ್ದಳು. ಮದುವೆ ಎಂದರೆ ಎರಡು ವ್ಯಕ್ತಿಗಳ ನಡುವೆ ಅಲ್ಲ, ಎರಡು ಕುಟುಂಬಗಳ ನಡುವಿನ ಬಾಂಧವ್ಯ. ನನಗೆ ತಾಯಿಯಿಲ್ಲ. ನಿನ್ನ ತಾಯಿಯನ್ನು ನನ್ನ ತಾಯಿಯಂತೆ ನೋಡಿಕೊಳ್ಳುತ್ತೇನೆ ಅಂತ ಅಂದಿದ್ದಳು. ಇದು ನನಗೆ ತುಂಬಾ ಇಷ್ಟವಾಗಿತ್ತು.'

ಭಾವೀ ಅತ್ತೆಯನ್ನು ತಾಯಿಯಂತೆ ನೋಡಿಕೊಳ್ಳುತ್ತೇನೆ ಎಂದು ಭರವಸೆ ಕೊಟ್ಟವಳು ಈಗ ತುಚ್ಛೀಕರಿಸುವುದಕ್ಕೆ ಏನು ಕಾರಣ? ಮಮತಾಳನ್ನು ನೇರವಾಗಿ ಕೇಳಿದೆ. 'ಮಮತಾ, ನಿಮ್ಮ ತಾಯಿ ನಿಮ್ಮನ್ನು ಪ್ರೀತಿಸಲಿಲ್ಲ ಎಂದು ಹೇಳಿದಿರಿ. ಅದರಿಂದ ನಿಮಗೆಷ್ಟು ಅನಾಥಪ್ರಜ್ಞೆ ಕಾಡಿರಬಹುದು ಎಂಬುದು ನನಗೆ ಅರ್ಥವಾಗುತ್ತದೆ... ಅವರು ಅಂತ್ಯಕಾಲದಲ್ಲಿ ನಿಮ್ಮ ಜೊತೆಗೆ ಹೇಗಿದ್ದರು?'

ಮಮತಾ ಒಮ್ಮೆಲೇ ಗಂಭೀರಳಾದಳು. ತನ್ನಷ್ಟಕ್ಕೆ ತಾನಾಗಿ, ಮೌನವಾಗಿ ಅಳಲು ಶುರುಮಾಡಿದಳು. ಸುಮಾರು ಹೊತ್ತಿನ ನಂತರ ಕೆಳದನಿಯಲ್ಲಿ ಹಂಚಿಕೊಂಡಳು. ಆಕೆ ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾಗ ಇಲ್ಲಿದ್ದ ತಾಯಿಗೆ ಕ್ಯಾನ್ಸರ್ ಎಂದು ಗೊತ್ತಾಯಿತು. ಆಗಷ್ಟೇ ಮೊದಲ ಗಂಡನ ವಿಕೃತ ವರ್ತನೆಯನ್ನು ಸಹಿಸದೆ ಒದ್ದಾಡುತ್ತಿದ್ದವಳು ಕೂಡಲೇ ಹಾರಿಬಂದು ತಾಯಿಯ ಔಷಧೋಪಚಾರ ಮಾಡಿದಳು. ತಾಯಿಯು ತನ್ನ ನೋವನ್ನು ಹೇಳಿಕೊಂಡಳೇ ವಿನಾ ಮಗಳ ಸಂಸಾರದ ಬಗೆಗೆ ವಿಚಾರಿಸಲಿಲ್ಲ. ಇವಳೇ ಬಾಯಿಬಿಟ್ಟು ಗಂಡನ ವರ್ತನೆಯ ಬಗೆಗೆ ಹೇಳಿಕೊಂಡಾಗ ಆಕೆ ಏನೆಂದಳು? 'ಬೇರೆ ಜಾತಿಯವ, ಬೇಡವೆಂದರೂ ಕಟ್ಟಿಕೊಂಡಿದ್ದೀಯಾ. ಏನು ಮಾಡುತ್ತೀಯಾ ನೋಡು' ತಾಯಿ ತನ್ನನ್ನು ದೂರೀಕರಿಸಿ ಒಂಟಿಯಾಗಿ ಮಾಡಿದಳು ಎಂದು ಮಮತಾಗೆ ಅತೀವ ಸಂಕಟವಾಯಿತು. ಮೂರು ತಿಂಗಳ ನಂತರ ತಾಯಿಯ ಸ್ಥಿತಿ ಗಂಭೀರವಾಗಿದೆ ಎಂದು ಸುದ್ದಿ ಬಂದಾಗ ವಿಮಾನ ನಿಲ್ದಾಣದಿಂದ ನೇರವಾಗಿ ಆಸ್ಪತ್ರೆಗೆ ಧಾವಿಸಿದಳು. ಮುಂದಿನದನ್ನು ಅವಳ ಮಾತುಗಳಲ್ಲೇ ಹೇಳಬೇಕೆಂದರೆ, 'ಅಮ್ಮನನ್ನು ಸ್ಟ್ರೆಚರ್‌ನಲ್ಲಿ ಸಾಗಿಸುತ್ತಿದ್ದರು. ಓಡಿಹೋಗಿ ಕೈಹಿಡಿದುಕೊಂಡು ಅಮ್ಮಾ ಎಂದೆ. ಆಕೆ ನನ್ನ ಕಡೆ ನೋಡಿದಳು. ಮಾತಾಡುತ್ತಾಳೆ ಎಂದು ಕಾಯ್ದೆ... ಆಡಲಿಲ್ಲ. ಇನ್ನೊಂದು ಪಕ್ಕದಲ್ಲಿದ್ದ ತಮ್ಮನನ್ನು ನೋಡಿ ನಸುನಕ್ಕಳು. ನನ್ನನ್ನೂ ನೋಡಿ ನಗುತ್ತಾಳೆಂದು ಕಾತರಿಸಿದೆ. ಅಷ್ಟರಲ್ಲೇ ಕಣ್ಣು ಮುಚ್ಚಿದವಳು ಮತ್ತೆ ಕಣ್ಣು ತೆರೆಯಲೇ ಇಲ್ಲ...' ಮುಂದೆ ಆಕೆಯಾಡಿದ ಪಿಸುಮಾತುಗಳು ಭಾವನೆಗಳಾಗುತ್ತ ಕಂಬನಿಯ ಧಾರೆಯಲ್ಲಿ ಕೊಚ್ಚಿಹೋದುವು.

ಸಮಸ್ಯೆ ಸ್ಪಷ್ಟವಾಯಿತು! ಮಮತಾ ತನ್ನಮ್ಮನ ಜೊತೆಗೆ ಪ್ರೀತಿಯ ಬಾಂಧವ್ಯ ಕಟ್ಟಿಕೊಳ್ಳಲು ಸಾಧ್ಯವಾಗದೆ ಇದ್ದುದಕ್ಕೆ ಆಕೆಯ ಮೇಲೆ ಮುನಿಸಿದೆ. ಅವಳನ್ನು ಪ್ರಶ್ನಿಸಬೇಕೆಂದರೆ ಅವಳೇ ಇಲ್ಲವಲ್ಲ? ಸ್ವಂತ ತಾಯಿಯ ಮೇಲೆ ಸಾಧ್ಯವಾಗದಿರುವಾಗ ಗಂಡನ ತಾಯಿಯನ್ನು ಹೀನೈಸುತ್ತಿದ್ದಾಳೆ! ಹಾಗೆಯೆ, ತನ್ನ ಅಮ್ಮನನ್ನು ಪೂಜ್ಯಭಾವದಿಂದ ಪ್ರೀತಿಸುವ ಗಂಡನನ್ನೂ ಹೀನೈಸುತ್ತಿದ್ದಾಳೆ- ನನ್ನಮ್ಮ ಕೆಟ್ಟವಳಾದರೆ ನಿಮ್ಮಮ್ಮ ಹೇಗೆ ಒಳ್ಳೆಯವಳಾಗಿರಲು ಸಾಧ್ಯ, ನಾ ನಂಬಲಾರೆ ಎಂದು ಅವನನ್ನು ಹಿಡಿದು ಅಲ್ಲಾಡಿಸುತ್ತಿದ್ದಾಳೆ!

ಮುಂದಿನ ದಾರಿ ನಿಚ್ಚಳವಾಯಿತು. ಮಮತಾಳನ್ನು ಆಕೆಯ ತಲೆಯೊಳಗಿರುವ ತಾಯಿಯ ಜೊತೆಗೆ ಮಾತಾಡಲು ಗೆಸ್ಟಾಲ್ಟ್ ಸಂಭಾಷಣೆ ಏರ್ಪಡಿಸಿದೆ. ಎರಡು ಖಾಲಿ ಕುರ್ಚಿಗಳನ್ನು ಎದುರುಬದುರು ಇಟ್ಟು ಒಂದರಲ್ಲಿ ಮಮತಾಳನ್ನು ಕೂಡಿಸಿ, 'ಇಲ್ಲಿ ನಿಮ್ಮೆದುರು ನಿಮ್ಮಮ್ಮ ಕುಳಿತಿದ್ದಾರೆ ಎಂದು ಕಲ್ಪಿಸಿಕೊಳ್ಳಿ. ಆವೇಶ ಬಂದ ಕೂಡಲೇ ಅವರನ್ನು ಎದುರಿಸಿ ಮಾತಾಡಿ' ಎಂದು ಕಾಯ್ದೆ. ಮಮತಾ ಅಮ್ಮನನ್ನು ಎದುರಿಸಿದಳು. ನೀನೇಕೆ ನನಗೆ ಪ್ರೀತಿ ತೋರಿಸಲಿಲ್ಲ ಎಂದು ಕೇಳುತ್ತ ದುಃಖತಪ್ತಳಾದಳು. ಇಂಥ ನೂರಾರು ಸಂಭಾಷಣೆಗಳನ್ನು ಏರ್ಪಡಿಸಿದ್ದ ನನಗೆ ಪರಿಣಾಮ ಏನಾಗುತ್ತದೆ ಎಂದು ಗೊತ್ತಿರುವ ವಿಷಯ. ಎಲ್ಲ ತಾಯಂದಿರಂತೆ ಈ ತಾಯಿಯೂ, 'ಮಗೂ, ನಿನ್ನನ್ನು ನಾನು ತುಂಬಾ ಪ್ರೀತಿಸುತ್ತೇನೆ. ಆದರೆ ನನ್ನ ಮೇಲೆ ಒತ್ತಡ ಎಷ್ಟಿತ್ತು ಎಂದರೆ ನಿನಗೆ ಮುಕ್ತವಾಗಿ ಪ್ರಕಟಿಸಲು ಆಗಲಿಲ್ಲ' ಎಂಬರ್ಥದ ಮಾತಾಡುತ್ತಾಳೆ ಎಂದು ಕಾಯ್ದೆ. ಆದರೆ ಆದದ್ದೇ ಬೇರೆ! ತಾಯಿ ಹೇಳಿದಳು: 'ಅಯ್ಯೋ, ನನಗೇ ಯಾರೂ ಪ್ರೀತಿ ಕೊಡಲಿಲ್ಲ. ನಿನಗೆ ಎಲ್ಲಿಂದ ಕೊಡಲಿ?' ನನಗೆ ದಿಕ್ಕು ತೋಚದಂತಾಗಿ ಮುಂದುವರಿಯುವುದು ಹೇಗೆಂದು ಗೊತ್ತಾಗದೆ ಗೊಂದಲಕ್ಕೀಡಾದೆ. ಅಷ್ಟರಲ್ಲಿ ಮಮತಾಳೇ ತನ್ನ ಸಂಕಷ್ಟಕ್ಕೆ ಹಾದಿ ಹುಡುಕಿಕೊಂಡಳು. 'ಅಮ್ಮಾ, ನಿನಗೆ ಯಾರೂ ಪ್ರೀತಿ ಕೊಡದಿದ್ದರೆ ಏನಂತೆ, ನಾನು ಕೊಡುತ್ತೇನೆ...' ಎಂದು ಮುಂದಾಗಿ ತಾಯಿಯನ್ನು ತಬ್ಬಿಕೊಂಡಳು!

ಇದೆಲ್ಲವನ್ನು ಕಣ್ಣುಬಾಯಿಬಿಟ್ಟು ನೋಡುತ್ತಿದ್ದ ಮಹೇಶನಿಗೆ, ಮಮತಾ ಹೀನೈಸುತ್ತಿರುವುದು ಮಹೇಶನನ್ನಾಗಲೀ ಅವನ ತಾಯಿಯನ್ನಾಗಲೀ ಅಲ್ಲ, ಹೊರತಾಗಿ ಸ್ವಂತ ತಾಯಿಯನ್ನೇ ಎಂದು ವಿವರಿಸಿದೆ. ಚಿಕಿತ್ಸೆಗಾಗಿ ಇನ್ನೊಂದಷ್ಟು ಸಲ ಬರಲು ಆಹ್ವಾನಿಸಿ ಕಳಿಸಿಕೊಟ್ಟೆ. ಮಹೇಶನ ಮುಖದ ಮೇಲೆ ಖುಷಿ ಕಾಣದಿದ್ದರೂ ಸಮಾಧಾನದ ಛಾಯೆಯಂತೂ ಗುರುತಿಸುವಂತಿತ್ತು.

■

**ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.**